ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೆ ; ಹಾಗಿದ್ದಲ್ಲಿ ಇಲ್ಲಿಯವರೆಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು, ಕ್ರಮ ಕೈಗೊಳ್ಳಲಾಗಿದೆ. ಟೈರ್ ಸಂಸ್ಕರಣಾ ಘಟಕಗಳನ್ನೊಳಗೊಂಡಂತೆ ವಿಭಾಗೀಯ ಕಾರ್ಯಾಗಾರ ಹಾಗೂ ವಿಭಾಗೀಯ ಕಛೇರಿಗಳ ನಿರ್ಮಾಣ ಕಾರ್ಯಗಳು ಅಂತಿಮ ಹಂತದಲ್ಲಿದ್ದು, ಆಗಸ್ಟ್ 2002ರ ಅಂತ್ಯದೊಳಗೆ ಕಾಮಗಾರಿಗಳು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಲೈಸೆನ್ಸ ನೀಡುವುದು

1643 (1879) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀರ್ ಬ್ರಾಂಡಿ ಶಾಪ್‌ಗಳಿಗೆ ಮತ್ತು ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಸಿಎಲ್-2 ಮತ್ತು ಸಿಎಲ್-9 ಲೈಸೆನ್ಸ್‌ಗಳನ್ನು ಪ್ರಸಕ್ತ ವರ್ಷ ನೀಡಲಾಗುವುದೇ ?

ಆ) ಹಾಗಿದ್ದಲ್ಲಿ, ಬಾಗಲಕೋಟೆ ಜಿಲ್ಲೆಗೆ ನೀಡಲು ಉದ್ದೇಶಿಸಿರುವ ಅಂತಹ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ? ತಾಲ್ಲೂಕುವಾರು ವಿವರಗಳನ್ನು ನೀಡುವುದು.

ಇ) ಈ ಲೈಸೆನ್ಸ್‌ಗಳನ್ನು ನೀಡುವಾಗ ಸಲ್ಲಿಸಲಾದ ಅರ್ಜಿಗಳ ಜೇಷ್ಠತಾ ಪಟ್ಟಿಯನ್ವಯ ಪರಿಗಣಿಸಲಾಗುವುದೇ ?

ಈ) ಇಲ್ಲದಿದ್ದರೆ, ಅರ್ಹತೆಯ ಅಳತೆಗೋಲುಗಳೇನು ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಪ್ರತಿ ತಾಲ್ಲೂಕಿನಲ್ಲಿ ಇರಬೇಕಾದ ಸಿಎಲ್-2 (ಚಿಲ್ಲರೆ ಮದ್ಯದಂಗಡಿಗಳು) ಮತ್ತು ಸಿಎಲ್-9 (ಬಾರ್‌ಗಳು) ಸನ್ನದುಗಳ ಸಂಖ್ಯೆಯನ್ನು ನಿಗಧಿಪಡಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಸದರಿ ಕೋಟಾ ನಿಗಧಿಪಡಿಸಿದ ನಂತರ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಆ) ಇ) ಈ) ಪ್ರಶ್ನೆ (ಅ) ಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಗದಗ್ ಬಿಜಾಪುರ ಗೇಜ್ ಪರಿವರ್ತನಾ ಕಾರ್ಯದ ಪ್ರಗತಿ

1644 (1880) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರಕಾರದ ರೈಲು ಖಾತೆ ಮತ್ತು ಕರ್ನಾಟಕ ಸರ್ಕಾರದ ಮಧ್ಯ ಮಾಡಿಕೊಂಡಿರುವ ಒಪ್ಪಂದದನ್ವಯ ಗದಗ-ಬಿಜಾಪೂರ ಗೇಜ್ ಪರಿವರ್ತನಾ ಕಾರ್ಯಕ್ಕಾಗಿ ಕೇಂದ್ರ ಸರಕಾರ ಶೇಕಡ 26 ರಷ್ಟು ಹಣ ರಾಜ್ಯ ಸರ್ಕಾರದಿಂದ ಶೇಕಡ 26 ರಷ್ಟು ಧನ ಅಲ್ಲದೆ ರಾಜ್ಯ ಸರ್ಕಾರದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಇಲಾಖೆಯಿಂದ ಇನ್ನುಳಿದ ಶೇಕಡ 48 ರಷ್ಟು ಧನವನ್ನು ಸಾರ್ವಜನಿಕ ವ್ಯವಸ್ಥೆಗಳಿಂದ ಸಂಗ್ರಹಿಸಿ ಕಾಮಗಾರಿಯನ್ನು ಮುಗಿಸಬೇಕೆನ್ನುವ

ಕಟ್ಟಳೆ ಹಾಕಲಾಗಿರುವುದು ನಿಜವೆ ; ಒಪ್ಪಂದದ ವಿವರ ಹಾಗೂ ಸದರಿ ಕಾಮಗಾರಿಯ ಅಂದಾಜು ವೆಚ್ಚದ ವಿವರ ನೀಡುವುದು ?

ಅ) ಹಾಗಿದ್ದಲ್ಲಿ ಈ ಕಾರ್ಯಕ್ಕಾಗಿ ಇಲ್ಲಿಯವರೆಗೆ ಮಾಡಲಾದ ವೆಚ್ಚವೆಷ್ಟು. ಕೇಂದ್ರ-ರಾಜ್ಯ ಸರ್ಕಾರಗಳು ಇದಕ್ಕಾಗಿ ತೆಗೆದಿಡಲಾದ ಹಣವೆಷ್ಟು ; ಸಾರ್ವಜನಿಕ ಬ್ಯಾಂಕ್-ಸಂಸ್ಥೆಗಳಿಂದ ಇಲ್ಲಿಯವರೆಗೂ ಸಂಗ್ರಹಿಸಲಾಗಿರುವ ಹಣವೆಷ್ಟು ; ಎಲ್ಲಾ ವಿವರಗಳನ್ನು ನೀಡುವುದು ?

ಇ) ಒಟ್ಟಾರೆ, ಈ ಕಾರ್ಯದಲ್ಲಿ ಆಗಿರುವ ಪ್ರಗತಿ ಏನು ?

ಶ್ರೀ ಟಿ. ಜಾನ್ (ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ನಾಲ್ಕು ರೈಲ್ವೆ ಮೂಲ ಸೌಲಭ್ಯ ಅಭಿವೃದ್ಧಿ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಮತ್ತು ಹಣ ತೊಡಗಿಸುವ ಮುಖ್ಯ ಧ್ಯೇಯೋದ್ದೇಶದಿಂದ ರೈಲ್ವೆ ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಗಮ (ಕೆ-ರೈಡ್) ಎಂಬುದನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ದಿನಾಂಕ : 20-9-2000 ದಂದು ಕೇಂದ್ರ ಸರ್ಕಾರದ ರೈಲ್ವೆ ಮಂತ್ರಾಲಯದೊಂದಿಗೆ ಜ್ಞಾಪನ ಒಪ್ಪಂದಕ್ಕೆ ಬರಲಾಗಿದೆ. ಅದರಂತೆ ಕಂಪನಿ ಕಾಯ್ದೆ 1956ರ ಅನ್ವಯ ದಿನಾಂಕ : 20-11-2001 ಕೆ-ರೈಡ್‌ನ್ನು ಸ್ಥಾಪಿಸಲಾಯಿತು. ಜ್ಞಾಪನ ಒಪ್ಪಂದದ ಅಡಿಯಲ್ಲಿ ಸೊಲ್ಲಾಪುರ (ಬಿಜಾಪುರ)-ಗದಗ ಗೇಜ್ ಪರಿವರ್ತನೆ ಸಹ ಒಳಗೊಂಡಿದೆ. ಗದಗ-ಬಿಜಾಪುರ ಗೇಜ್ ಪರಿವರ್ತನೆಯ ಒಟ್ಟಾರೆ ವೆಚ್ಚ ರೂ. 127.00 ಕೋಟಿಗಳು.

ಆ) ಸೋಲಾಪುರ-ಗದಗ್‌ನ ಗೇಜ್ ಪರಿವರ್ತನೆಯ ಯೋಜನೆಯನ್ನು 50 : 50 ಪ್ರಮಾಣದ ವೆಚ್ಚವನ್ನು ರೈಲ್ವೆ ಮತ್ತು ರಾಜ್ಯ ಸರ್ಕಾರಗಳು ಭರಿಸುವ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಭಾರತ ಸರ್ಕಾರವು ರೂ. 20.00 ಕೋಟಿಗಳನ್ನು ಇದಕ್ಕೆ ಮೀಸಲಾಗಿರಿಸಿದ್ದು, ರಾಜ್ಯ ಸರ್ಕಾರವು ಕೂಡ ಸಮನಾದ ಮೊತ್ತವಾದ ರೂ. 20.00 ಕೋಟಿ ಗಳನ್ನು ಆಯವ್ಯಯದಲ್ಲಿ ಒದಗಣಿ ಮಾಡಲಾಗಿದೆ.

ಇ) ಸೋಲಾಪುರದಿಂದ ಬಿಜಾಪುರದವರೆಗಿನ ಗೇಜ್ ಪರಿವರ್ತನೆ ಈಗಾಗಲೇ ಮುಗಿದಿರುತ್ತದೆ. ಬಿಜಾಪುರದಿಂದ ಬಾಗಲಕೋಟೆವರೆಗಿನ 97 ಕಿ.ಮೀ. ಉದ್ದದ ಮಾರ್ಗದ ಪರಿವರ್ತನ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಮಾರ್ಗವು ಒಂದು ಪ್ರಮುಖ ಹಾಗೂ ಇನ್ನೊಂದು ದೊಡ್ಡ ಸೇತುವೆ ಕಾಮಗಾರಿ ಒಳಗೊಂಡಿರುತ್ತದೆ. ಇವುಗಳ ನಿರ್ಮಾಣ ಮುಕ್ತಾಯಗೊಂಡ ನಂತರ ಹಾಗೂ ಈ ಮಾರ್ಗ ಸಂಚಾರಕ್ಕೆ ಮುಕ್ತವಾದ ನಂತರ 93 ಕಿ.ಮೀ. ಉದ್ದದ ಬಾಗಲಕೋಟೆಯಿಂದ ಗದಗ್‌ವರೆಗಿನ ಪರಿವರ್ತನ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಕೆ.ಎಸ್.ಆರ್.ಟಿ.ಸಿ. ಯ ನಿವೃತ್ತ ನೌಕರರಿಗೆ ಸಾರಿಗೆಯಲ್ಲಿ ಉಚಿತ ಪಾಸ್

1648 (1858) ಶ್ರೀ ರಾಮದಾಸ್ ಎ. (ಕೃಷ್ಣರಾಜ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಎಸ್.ಆರ್.ಟಿ.ಸಿ. ಯ ನಿವೃತ್ತ ನೌಕರರಿಗೆ ರಾಜ್ಯ ಸಾರಿಗೆಯಲ್ಲಿ ಉಚಿತವಾಗಿ ಸಂಚರಿಸಲು ಪಾಸ್ ನೀಡಲಾಗಿದೆಯೇ ; ಈ ಪ್ರಯೋಜನವನ್ನು ಎಷ್ಟು ಜನ ಪಡೆಯುತ್ತಿದ್ದಾರೆ.

ಆ) ಉಚಿತವಾಗಿ ಸಂಚರಿಸುವ ಸೌಲಭ್ಯ ಕೇವಲ ನಗರ ಸಾರಿಗೆಗೆ ಸೀಮಿತವಾಗಿದೆಯೇ ;